# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 756 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 13.07.2023 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿರವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ತಯಾರಿಸುತ್ತಿರುವ ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2041 ಯಾವ ಹಂತದಲ್ಲಿದೆ ಮತ್ತು ಯೋಜನೆಯನ್ನು ತಯಾರಿಸಲು ಯಾವ ಸಂಸ್ಥೆಗೆ ವಹಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನಗರ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2031ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13 (1) ರಡಿಯಲ್ಲಿ ತಾತ್ಕಾಲಿಕ ಅನುಮೋದನೆಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 516 ಬೆಂಆಸೇ 2017, ಬೆಂಗಳೂರು ದಿನಾಂಕ: 22.11.2017 ರಲ್ಲಿ ನೀಡಲಾಗಿತ್ತು.<br><br>ಸರ್ಕಾರದ ಆದೇಶ ಸಂಖ್ಯೆ:ನಅಇ 516 ಬೆಂಆಸೇ 2017, ಬೆಂಗಳೂರು ದಿನಾಂಕ: 22.06.2020 ರಲ್ಲಿ ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2031ಕ್ಕೆ ಸಂಬಂಧಿಸಿದಂತೆ ನೀಡಿದ್ದ ತಾತ್ಕಾಲಿಕ ಅನುಮೋದನೆಯನ್ನು ಹಿಂಪಡೆಯಲಾಗಿರುತ್ತದೆ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 10 ರ ಅಡಿಯಲ್ಲಿ ದಿನಾಂಕ: 01.11.2020 ರಲ್ಲಿ ಪರಿಷ್ಕೃತ ಮಹಾಯೋಜನೆ ತಯಾರಿಕೆ ಇಚ್ಛೆ ಘೋಷಣೆಯನ್ನು ಪ್ರಕಟಿಸಲಾಗಿರುತ್ತದೆ.<br><br>ಪರಿಷ್ಕೃತ ಮಹಾಯೋಜನೆ-2041 ರ ತಯಾರಿಕೆ ಕಾರ್ಯಕ್ಕೆ ದಿನಾಂಕ:20.12.2021 ರಂದು ಇ-ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ಗೆ ಬಿಡ್‌ದಾರರು ಭಾಗವಹಿಸಿಲ್ಲದ ಕಾರಣ ದಿನಾಂಕ:11.04.2022 ರಂದು ಮರು ಟೆಂಡರ್ ಅನ್ನು ಕರೆಯಲಾಗಿರುತ್ತದೆ.<br>ಮರು ಟೆಂಡರ್‌ನಲ್ಲಿ ರೂ.8.44ಕೋಟಿ ಬಿಡ್ ಮೊತ್ತಕ್ಕೆ ಯಶಸ್ವಿ ಬಿಡ್‌ದಾರರಾದ ಮೆ:ರುದ್ರಾಭಿಷೇಕ್ ಎಂಟರ್ ಪ್ರೈಸಸ್ ರವರನ್ನು ಸಮಾಲೋಚಕರಾಗಿ ಆಯ್ಕೆ ಮಾಡಲಾಗಿತ್ತು. ಅಗತ್ಯ ಉಪಗ್ರಹ ಮಾಹಿತಿಗಾಗಿ ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರಕ್ಕೆ ರೂ.1.40ಕೋಟಿ ಮೊತ್ತವನ್ನು ಪಾವತಿಸಲಾಗಿತ್ತು.<br><br>ಡ್ರೋಣ್ ಇಮೇಜ್ ಹೆಚ್ಚು ನಿಖರತೆ ಇರುವುದರಿಂದ |

| | | |
|---|---|---|
| | | ಡ್ರೋಣ್ ಇಮೇಜ್ ಆಧರಿಸಿ ಪರಿಷ್ಕೃತ ಮಹಾಯೋಜನೆ ತಯಾರಿಕೆ ಕುರಿತು ದಿನಾಂಕ:27.07.2022 ರಂದು ಸರ್ಕಾರದ ಹಂತದಲ್ಲಿ ಜರುಗಿದ ಸಭೆಯ ನಡವಳಿ ಹಾಗೂ ದಿನಾಂಕ: 20.10.2022 ರಂದು ಜರುಗಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯ ನಡವಳಿಗಳಲ್ಲಿ ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2041 ಅನ್ನು ಡ್ರೋಣ್ ಇಮೇಜರಿ ಆಧರಿಸಿ ತಯಾರಿಸಲು ನಿರ್ಣಯಿಸಲಾಗಿರುತ್ತದೆ. ಡ್ರೋಣ್ ಇಮೇಜರಿ ಆಧರಿಸಿ ಮೂಲನಕ್ಷೆ, ಹಾಲಿ ಭೂಉಪಯೋಗ ಮತ್ತು ಹಾಲಿ ಭೂಬಳಕೆ ನಕ್ಷೆಗಳ ತಯಾರಿಕೆ ಕಾರ್ಯವನ್ನು ರೂ.12.15 ಕೋಟಿ ವೆಚ್ಚದಲ್ಲಿ ರಾಜ್ಯ ಸರ್ಕಾರದ 'ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ' (KSRSAC) ಕ್ಕೆ ವಹಿಸಲಾಗಿದೆ.<br><br>ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರದ ರೂ.12.15ಕೋಟಿ ವೆಚ್ಚದ ಪ್ರಸ್ತಾವನೆಗೆ ಕರ್ನಾಟಕ ಪಾರದರ್ಶಕ ಕಾಯ್ದೆಯ (KTPP) '4ಜಿ' ವಿನಾಯಿತಿ ಕೋರಿ ಸಲ್ಲಿಸಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ) | ಸರ್ಕಾರದಿಂದ ಅನುಮೋದಿತವಾದ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಯಾರಿಸಿದ ಈ ಪರಿಷ್ಕೃತ ಮಹಾಯೋಜನೆ-2041ನ್ನು ಕೈಬಿಡಲು ಕಾರಣಗಳೇನು ಮತ್ತು ಪ್ರಸ್ತುತದಲ್ಲಿ ರಾಜ್ಯ ಸರ್ಕಾರವಾಗಲಿ ಬಿಬಿಎಂಪಿಯಾಗಲಿ ಅಥವಾ ಬಿಡಿಎಯಾಗಲಿ ಯೋಜನಾ ಮಂಜೂರಾತಿಗಳಿಗೆ ಯಾವ ಮಹಾಯೋಜನೆಯನ್ನು ಅನುಸರಿಸುತ್ತಿವೆ: (ಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ನಅಇ 516 ಬೆಂಆಸೇ 2017, ಬೆಂಗಳೂರು ದಿನಾಂಕ:22.06.2020 ರಲ್ಲಿ ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2031ಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 516 ಬೆಂಆಸೇ 2017, ದಿನಾಂಕ 22.11.2017 ರಲ್ಲಿ ನೀಡಿದ್ದ ತಾತ್ಕಾಲಿಕ ಅನುಮೋದನೆಯನ್ನು ಹಿಂಪಡೆಯಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2041ಕ್ಕೆ ತಯಾರಿಕೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.<br><br>ಪ್ರಸ್ತುತ, ಯೋಜನಾ ಮಂಜೂರಾತಿಗಳಿಗೆ ಅನುಮೋದಿತ ಪರಿಷ್ಕೃತ ಮಹಾಯೋಜನೆ-2015 ಅನ್ನು ಅನುಸರಿಸಲಾಗುತ್ತಿರುತ್ತದೆ. |
| ಇ) | ಅನುಮೋದಿತ ನಗರ ಮಹಾಯೋಜನೆ ಇಲ್ಲದೆ ನಗರ ಸ್ಥಳೀಯ ಸಂಸ್ಥೆಗಳ ವ್ಯವಸ್ಥಿತ ರೀತಿಯಲ್ಲಿ ಕಾರ್ಯ ನಿರ್ವಹಿಸದೆ ಹಲವು ರೀತಿಯ ಅಕ್ರಮಗಳಿಗೆ ಎಡೆಮಾಡಿಕೊಡುವುದನ್ನು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 540 ಬೆಂಆಸೇ 2004, ದಿನಾಂಕ: 25.06.2007 ರಲ್ಲಿ ಅನುಮೋದಿತ ಪರಿಷ್ಕೃತ ಮಹಾಯೋಜನೆ-2015 ರ ಅನುಸಾರ ಕಾರ್ಯನಿರ್ವಹಿಸಲಾಗುತ್ತಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪರಿಷ್ಕೃತ ಮಹಾಯೋಜನೆ 2041 ರ ತಯಾರಿಕೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. |

| | | |
|---|---|---|
| ಈ) | ಭಾರತ ಸಂವಿಧಾನದ 74ನೇ ತಿದ್ದುಪಡಿಗಳನ್ವಯ ಸ್ಥಳೀಯ ನಗರ ಸಂಸ್ಥೆಗಳ ಮಹಾಯೋಜನೆಗಳನ್ನು ಮಹಾನಗರ ತಯಾರಿಸಬೇಕೆಂಬ ನಿಬಂಧನೆ ಇದ್ದರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಹಾಯೋಜನೆ ತಯಾರಿಸುತ್ತಿರುವುದು ಸಮಂಜಸವೆ; ಈ ಬಗ್ಗೆ ಪ್ರಸ್ತುತ ಸರ್ಕಾರದ ನಿಲುವೇನು? (ಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅಡಿಯಲ್ಲಿ ಯೋಜನಾ ಪ್ರಾಧಿಕಾರವಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13 (D) ರ ಅಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆಯನ್ನು ಯೋಜನಾ ಪ್ರದೇಶವು ತಯಾರಿಸಬೇಕಾಗಿರುತ್ತದೆ. ಅದರಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13 ರ ಅಡಿಯಲ್ಲಿ ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2041 ನ್ನು ತಯಾರಿಸಲಾಗುತ್ತಿರುತ್ತದೆ. |

ಸಂಖ್ಯೆ: ನಅಇ 129 ಬೆಂಆಸೇ 2023(ಇ)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ